## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.223/2018** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವಶೆಟ್ಟಿ ಅಲಿಯಾಸ್ ಶೆಟ್ಟಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 30 –10 –2025. |

**ಪಾಟೀ ಸವಾಲುಃ ಶ್ರೀ ವಾದಿ ಪರ ವಕೀಲರಿಂದಃ**

ವಾದಿ ನನ್ನ ಅಣ್ಣ ಎಂದರೆ ಸರಿ. ನನ್ನ ತಂದೆಗೆ ಐದು ಜನ ಮಕ್ಕಳು ಇರುತ್ತಾರೆ. ಅವರುಗಳೆಂದರೆ ಮುದ್ದಯ್ಯ, ಚಿಕ್ಕಮಾದಯ್ಯ, ಮಹದೇವಯ್ಯ, ಮಹದೇವಸ್ವಾಮಿ ಮತ್ತು ಪುಟ್ಟಮಾದಯ್ಯ . ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಂತಹ ಎಷ್ಟು ಆಸ್ತಿಗಳು ಇವೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಮತ್ತು ತಮ್ಮಂದಿರ ನಡುವೆ ಆಸ್ತಿಗಳ ಭಾಗ ಆಗಿರುತ್ತದೆ ಎಂದರೆ ಸರಿ. ಭಾಗ ಆಗಿ ಸುಮಾರು 30 ವರ್ಷಗಳು ಆಗಿವೆ. ನನ್ನ ಅಣ್ಣ ಮತ್ತು ತಮ್ಮಂದಿರಿಗೆ ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟು ಆಸ್ತಿಗಳು ಬಂದಿರುತ್ತದೆ ಎಂದುದನ್ನು ನನಗೆ ಹೇಳಲು ಬರುವುದಿಲ್ಲ. ಮುತ್ತ ಎಷ್ಟು ಎಕರೆ ಜಮೀನ್ನು ಕೊಟ್ಟಿರುತ್ತಾರೆ ಎಂಬುದರ ಬಗ್ಗೆ ಸಹ ನನಗೆ ಹೇಳಲು ಬರುವುದಿಲ್ಲ. ಆಸ್ತಿ ಭಾಗ ಆಗಿರುವ ಯಾವುದಾದರೂ ಬರವಣಿಗೆ ಆಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಆಸ್ತಿಗಳ ಭಾಗ ಆಗಿರುವ ಬಗ್ಗೆ ಬರವಣಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಬರವಣಿಗೆ ಆದ ಪತ್ರ ಯಾರ ಬಳಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿರವರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಆಗುವಾಗ ನನ್ನ ತಂದೆಯವರು ಇದ್ದರು ಎಂದರೆ ಸರಿ. ವಿಭಾಗ ಆದ ಬಳಿಕ ನಿಮಗೆ ಎಷ್ಟು ಎಕರೆ ಜಮೀನು ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಏಕೆಂದರೆ ನಾನು ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಐದು ಗಂಡು ಮಕ್ಕಳಿಗೂ ವಿಭಾಗ ಬಂದಿರುತ್ತದೆ ಎಂದರೆ

ಸರಿ. ಸರ್ವೆ ನಂಬರ್ ಮತ್ತು ಎಷ್ಟು ಎಕರೆ ಆಸ್ತಿ ಬಂದಿರುತ್ತದೆ ಎಂಬುದರ ಬಗ್ಗೆಯೂ ನನಗೆ ಗೊತ್ತಿಲ್ಲ.

ನಿಮ್ಮ ಭಾಗಕ್ಕೆ ಎಷ್ಟು ಅಸ್ತಿ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಒಬ್ಬೊಬ್ಬರಿಗೆ 20 ಗುಂಟೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಒಬ್ಬೊಬ್ಬರಿಗೆ ಬಂದಂತಹ 20 ಗುಂಟೆ ಒಂದೇ ಸರ್ವೆ ನಂಬರಿನ ಆಸ್ತಿಗಳಾಗಿರುತ್ತವೆ. ಅವರವರಿಗೆ ಬಂದತಂಹ ಅಸ್ತಿಗಳಲ್ಲಿ ಅವರು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ ಮತ್ತು ಅವರವರ ಕುಟುಂಬದ ಜೊತೆಗೆ ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಒಬ್ಬೊಬ್ಬರಿಗೆ ಬಂದಂತಹ 20 ಗುಂಟೆ ಜಮೀನು ಅವರವರ ಹೆಸರಿನಲ್ಲಿ ಖಾತೆ ಆಗಿರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಖಾತೆ ಆಗಿರುವುದಿಲ್ಲ ಮತ್ತು ನನ್ನ ತಂದೆಯವರ ಹೆಸರಿನಲ್ಲಿಯೇ ಇರುತ್ತದೆ ಎಂದು ನುಡಿಯುತ್ತಾರೆ. ನಿಮಗೆ ಬಂದಂತಹ ಭಾಗದ ಖಾತೆಯನ್ನು ನೀವು ಏಕೆ ಮಾಡಿಸಿಕೊಂಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ವಂಶಾವಳಿ ಪತ್ರ ಕೇಳುತ್ತಾರೆ ಅದ್ದರಿಂದ ನನಗೆ ಖಾತೆ ಬದಲಾವಣೆ ಮಾಡಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**